ಅಧ್ಯಕ್ಷರ ಅಪ್ಪಣೆ ಮೇರೆಗೆ

ಬಾಲ್ಯ ವಿವಾಹ ಕುರಿತು

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಉಪಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರ ಎದುರಿಗೆ ಬಾಲ್ಯ ವಿವಾಹ ನಡೆದಿರುವ ಬಗ್ಗೆ, ನಾವು ಇದನ್ನು ಬಹಳ ತೀವ್ರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮ ರಾಜ್ಯದ ನೀತಿ, ಸರ್ಕಾರದ ನೀತಿ, ಎಲ್ಲಾ ದೃಷ್ಟಿಯಿಂದಲೂ ಬಾಲ್ಯ ವಿವಾಹ ಮಾಡತಕ್ಕಂಥದ್ದು ಅಪರಾಧ ಎನ್ನುವುದು ಕಾನೂನಿನಲ್ಲಿದೆ. ಉಪ ಮುಖ್ಯಮಂತ್ರಿಗಳು, ಶಾಸಕರು ಹಾಗೂ ಇಬ್ಬರು ಮಂತ್ರಿಗಳ ಎದುರಿಗೆ ಈ ಬಾಲ್ಯ ವಿವಾಹ ನಡೆಸುವುದಾದರೆ ಇದು ನಿಜಕ್ಕೂ ಅಪಾಯದ ಬೆಳವಣಿಗೆ. ಇದರ ಬಗ್ಗೆ ಸರ್ಕಾರ ಯಾವುದೇ ಗಮನಹರಿಸಿಲ್ಲ. ನೂರಾರು ಮದುವೆಗಳ ಮಧ್ಯೆ ಸಣ್ಣ ಮಕ್ಕಳು ಅಂದರೆ ಅವರಿಗೆ ಪ್ರಪಂಚದ ಜ್ಞಾನವೇ ಇಲ್ಲದಿರತಕ್ಕಂಥ, ಪ್ರಪಂಚದ ವಿದ್ಯಾಮಾನಗಳೇ ಗೊತ್ತಿಲ್ಲದೇ ಇರತಕ್ಕಂಥ ಮಕ್ಕಳನ್ನು ಕಂಕುಳದಲ್ಲಿ ಎತ್ತಿಕೊಂಡು ಬಂದು ಮದುವೆ ಮಾಡಿಸಿರುವ ವಿಚಾರದ ಬಗ್ಗೆ ಸರ್ಕಾರ ಲಘುವಾಗಿ ಪರಿಗಣಿಸದೆ, ಯಾರು ಇಂಥ ಮದುವೆಯನ್ನು ಅರೆಂಜ್ ಮಾಡಿದ್ದಾರೆ ಇವರ ಬಗ್ಗೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು. ಹಾಗೂ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ನಾವು ಸುಮ್ಮನೆ ಕಾನೂನು ಮಾಡಿ ಅದರ ಬಗ್ಗೆ ಮಾತನಾಡಿದರೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಈ ಕಾನೂನು ರಚನೆ ಮಾಡಿರುವವರು ಈ ಕಾನೂನನ್ನೇ ಪಾಲಿಸುವುದಿಲ್ಲವೆಂದರೆ ಹೇಗೆ? ಉಪಮುಖ್ಯಮಂತ್ರಿಗಳು, ಶಾಸಕರು, ಮಂತ್ರಿಗಳು, ಇಂಥ ಮದುವೆಯಲ್ಲಿ ಭಾಗವಹಿಸಿ ಮದುವೆ ನಡೆಸುವುದಾದರೆ ಪರಿಸ್ಥಿತಿ ಏನಾಗುತ್ತದೆ? ಇದರ ಬಗ್ಗೆ ಸರ್ಕಾರದ ಚಿಂತನೆ ಏನು? ಸರ್ಕಾರದ ನಿರ್ಧಾರ ಏನು? ತನಿಖೆ ನಡೆಸಿದ್ದೀರಾ? ಇದರ ಬಗ್ಗೆ ಗಮನ ಹರಿಸಿದ್ದೀರಾ? ಇದರಿಂದಾಗುವ ಅಪಾಯಗಳೇನು? ಈ ವಿಚಾರ ಪತ್ರಿಕೆಯಲ್ಲಿ ಬಂದಿದ್ದರೂ ಇದಕ್ಕೆ ನಾವು ಗಮನಹರಿಸುವುದಿಲ್ಲ ಎಂದು ಹೇಳುತ್ತೀರಿ. ಅಲ್ಲಿಗೆ ಶಾಸಕರು, ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹೋಗಿಲ್ವೇ? ಇಂಥ ಪರಿಸ್ಥಿತಿ ಇರುವಾಗ ಮಾನ್ಯ ಸಂಸದೀಯ ಸಚಿವರು ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು ಎಂಬುದನ್ನು ಹೇಳಿಕೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ನಿನ್ನೆಯ ಒಂದು ಪತ್ರಿಕೆಯಲ್ಲಿ ಲಿಂಗಸೂರಿನಲ್ಲಿ ಒಂದು ಸಾಮೂಹಿಕ ವಿವಾಹದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಹೋಗಿದ್ದಾರೆಂದು ಸುದ್ದಿ ಬಂದಿದೆ. ನಾನು ನೇರವಾಗಿ ಹೇಳುವುದಾದರೆ, ಉಪ ಮುಖ್ಯಮಂತ್ರಿಗಳು ಮತ್ತು ಕೆಲವು ಇತರೆ ಮಂತ್ರಿಗಳು ಹಾಗೂ ಶಾಸಕರು ನಮ್ಮ ಶಾಸಕರ ಮಿತ್ರರಾದ ಅಮರೇಗೌಡ ಪಾಟೀಲ್‌ರವರ ಕುಟುಂಬದ ಮದುವೆಗೆ ಹೋಗಿರುವುದು ನಿಜ. ಆದರೆ ಪತ್ರಿಕೆಯಲ್ಲಿ ಸಾಮೂಹಿಕ ಮದುವೆ ನಡೆಸುವ ಸಂದರ್ಭದಲ್ಲಿ ಬಾಲ್ಯ ವಿವಾಹ ನಡೆದಿದ್ದು ಅಲ್ಲಿಗೆ ಉಪಮುಖ್ಯಮಂತ್ರಿಗಳು ಹೋಗಿದ್ದಾರೆಂದು ಹೇಳುವುದು ಸರಿಯಲ್ಲ. ಇದು ಸತ್ಯಕ್ಕೆ ದೂರವಾದುದು. ನಾನು ಪತ್ರಿಕೆಯಲ್ಲಿ ಬಂದಿರುವ ವರದಿ ಬಗ್ಗೆ ನೋಡಿದ್ದೇನೆ. ಹಾಗೂ ನಿನ್ನೆ ಕೂಡ ಮೇಲ್ಮನೆಯಲ್ಲಿ ಈ ವಿಚಾರದ ಬಗ್ಗೆ

ಉತ್ತರಿಸಿದ್ದೇನೆ. ಕೆಲವು ಕಡೆ ಸಾಮೂಹಿಕ ವಿವಾಹ ನಡೆಸುವ ನೆಪದಲ್ಲಿ ಅಪ್ರಾಪ್ತ ವಯಸ್ಸಿನ ಹುಡುಗರು-ಹುಡುಗಿಯರ ಮದುವೆ ಹಾಗೂ ಈ ಬಾಲ್ಯ ವಿವಾಹ ನಡೆದಿರುವುದು ಅಲ್ಲಿ-ಇಲ್ಲಿ ಕೆಲವು ಪತ್ರಿಕೆಗಳಲ್ಲಿ ವರದಿ ಬಂದಿದೆ. ಹಾಗೂ ಇಂಥ ಮದುವೆಗಳಲ್ಲಿ ಕೆಲವು ಜನ ಮಠಾಧಿಪತಿಗಳು ಹಾಜರಿದ್ದರು ಎನ್ನುವುದು ಕೂಡ ವರದಿಯಲ್ಲಿ ಬಂದಿದೆ. ಆದರೆ ಮಾನ್ಯ ವಾಟಾಳರೇ ಇವತ್ತು 18 ವರ್ಷ ತುಂಬಿರದ ಹುಡುಗಿಗೆ 21 ವರ್ಷ ತುಂಬಿರದ ಹುಡುಗರಿಗೆ ಮದುವೆ ಮಾಡುವುದಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶವಿಲ್ಲ. ಇದೊಂದು ಸಾಮಾಜಿಕವಾದ ಸಮಸ್ಯೆ, ಇದರ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಬೇಕು. ಸಾಮೂಹಿಕ ಮದುವೆ ಮಾಡಿಸುವ ನೆಪದಲ್ಲಿ ಕೆಲವು ಭಾಗಗಳಲ್ಲಿ ಇಂಥ ಬಾಲ್ಯ ವಿವಾಹಗಳು ನಡೆಯುತ್ತಿವೆ. ಇದರ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. ಆದರೆ, ಬಹಳ ಪ್ರಾಮುಖ್ಯವಾಗಿ ಗಮನಿಸಬೇಕಾದ ಅಂಶ ಏನೆಂದರೆ, ಇಂಥ ಕೆಲವು ಮದುವೆಗಳು ಮಠಾಧಿಪತಿಗಳು ನಡೆಸುತ್ತಾರೆ, ಕೆಲವು ಶಾಸಕರ ಹೆಸರಿನಲ್ಲಿ ನಡೆಸಿರತಕ್ಕಂಥದ್ದೂ ಕೂಡ ನಮ್ಮ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರು ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳುತ್ತಾರೆ, ಇದರ ಬಗ್ಗೆ ನಾವು ಏನು ತನಿಖೆ ಮಾಡಬೇಕು? ನಾವು ಯಾರನ್ನು ತನಿಖೆ ಮಾಡಬೇಕು? ಇದನ್ನು ತಾವು ಹೇಳಬೇಕು. ಮದುವೆಯಾಗಿರುವವರನ್ನು ಕೇಳಬೇಕೇ ಅಥವಾ ಪೋಲೀಸ್‌ರವರನ್ನು ಕೇಳಬೇಕೇ ಅಥವಾ ತಹಸೀಲ್ದಾರ್‌ರವರನ್ನು ಕೇಳಬೇಕೇ?

ಶ್ರೀ ಕಾಗೋಡು ತಿಮ್ಮಪ್ಪ : ಈ ಬಾಲ್ಯ ವಿವಾಹ ನಡೆದಿರುವ ಬಗ್ಗೆ ಪತ್ರಿಕೆಯಲ್ಲಿ ಸುದ್ದಿ ಬಂದಿದೆ. ಆದರೆ ಬಾಲ್ಯ ವಿವಾಹ ನಡೆದಿರುವವರ ವಯಸ್ಸಿನ ದಾಖಲೆಗಳ ಬಗ್ಗೆ ಎಲ್ಲೂ ವರದಿಯಾಗಿಲ್ಲ, ವರದಿಯಾಗಿದ್ದರೆ ತನಿಖೆ ನಡೆಸಬಹುದು. ಇದನ್ನು ತಾವು ಮೊದಲು ಖಚಿತಪಡಿಸಿಕೊಳ್ಳಬೇಕು. ಅಂದರೆ ಬಾಲ್ಯ ವಿವಾಹ ನಡೆದಿರುವವರ ವಯಸ್ಸಿನ ದಾಖಲೆಗಳನ್ನು ಸಂಪೂರ್ಣವಾಗಿ ಖಚಿತಪಡಿಸಿಕೊಂಡು ತಾವು ತನಿಖೆಗಾಗಿ ಕೇಳಬೇಕು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಕಾಗೋಡು ತಿಮ್ಮಪ್ಪನವರು ಇದು ವದಂತಿಯಾಗುತ್ತದೆ ಇದನ್ನು ಹೌದು ಎಂದು ಹೇಗೆ ಹೇಳುತ್ತೀರಿ ಎಂದು ಹೇಳಿದ್ದಾರೆ. ಬಹುಶಃ ಅವರ ಮಾತನ್ನು ಒಪ್ಪುವುದಾದರೆ, ಅದೊಂದು ವದಂತಿಯಾಗಲಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಈ ಸಾಮೂಹಿಕ ಮದುವೆ ನಡೆಸುವ ಸಂದರ್ಭದಲ್ಲಿ ಮದುವೆ ಮಾಡಿಸುವಂತಹ ಸಂಘಟಿಕರು ವಯಸ್ಸಿನ ಮಿತಿಯನ್ನು ಹೇಳಿ ಒಂದು ಪ್ರಕಟಣೆ ಕೊಟ್ಟಿರುತ್ತಾರೆ. ಹೀಗಿದ್ದರೂ ಕೂಡ ಕೆಲವು ಸಂದರ್ಭದಲ್ಲಿ ಪಾಲಕರೇ ಬಂದು ಇಂಥ ಮದುವೆಯಲ್ಲಿ ಬಾಲ್ಯವಿವಾಹವನ್ನು ಮಾಡಿದ್ದರೆ ಅದು ಸಂಘಟಿಕರ ತಪ್ಪಲ್ಲ. ನಾನು ಕೂಡ ಹಿಂದೆ ಸರ್ವಧರ್ಮ ಸಮ್ಮೇಳನದ ಅಂಗವಾಗಿ ಸುಮಾರು 501 ಮದುವೆ ಮಾಡಿಸಿದೆ. ಮಾಡಿಸುವಂತಹ ಸಂದರ್ಭದಲ್ಲಿ ವಯಸ್ಸಿನ ಮಿತಿಯನ್ನು ಹಾಕಿ ಪ್ರಕಟಣೆ ಕೊಟ್ಟಿದ್ದರೂ, ಡೇಟ್ ಆಫ್ ಬರ್ತ್ ಸರ್ಟಿಫಿಕೇಟ್ ಬೇಕೆಂದೂ ಕೇಳಿ ಎಲ್ಲಾ ಸ್ಕ್ರುಟಿನಿ ಮಾಡಿದರೂ ಕೂಡ. ಕೊನೆ ಘಳಿಗೆಯಲಿ ಕೆಲವು ಇಂಥ ಹತ್ತಾರು ಜೋಡಿಗಳು ಬಂದು ಬಿಟ್ಟವು.

ಜೊತೆಗೆ ಇದು ಅನಿವಾರ್ಯ ಕೂಡ, ಇಂಥ ಸಂದರ್ಭದಲ್ಲಿ ಸಂಘಟಿಕರ ತಪ್ಪಲ್ಲ, ಪಾಲಕರು ಜಾಗೃತಗೊಂಡು, ತಾವು ಸ್ವಲ್ಪ ಎಚ್ಚೆತ್ತುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬಂದರು ಮತ್ತು ಮೀನುಗಾರಿಕೆ ಸಚಿವರು) : ಮಾನ್ಯ ಚಿಮ್ಮನಕಟ್ಟಿಯವರು ಇದು ಬಾಲ್ಯವಿವಾಹ ಹೌದು ಅಲ್ಲವೋ ಎಂದು ಸಂಘಟಿಕರಿಗೆ ಗೊತ್ತಾಗುವುದಿಲ್ಲವೆಂದು ಹೇಳಿದ್ದಾರೆ. ಮದುವೆಗೆ ಹೋಗುವವರು ಹುಡುಗಿ-ಹುಡುಗನ ವಯಸ್ಸು ಎಷ್ಟು ಎಂದು ಕೇಳಿಕೊಂಡು ಹೋಗುವುದಕ್ಕೆ ಸಾಧ್ಯವೆ? ಇನ್ನು ಮೇಲೆ ಪ್ರತಿ ಮದುವೆಗೆ ಹೋಗುವಾಗ ಮದುಮಗನ : ಮದುಮಗಳ ವಯಸ್ಸೆಷ್ಟು ಎಂದು ಕೇಳಿಕೊಂಡು ಹೋಗುವ ಪರಿಸ್ಥಿತಿ ಬರಬಾರದು.

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) : ನಾನೂ ಕೂಡ ಮದುವೆಗೆ ಹೋಗಿದ್ದೆ. ಅಲ್ಲಿ ಯಾರೂ ಕೂಡ ಸಣ್ಣ ಹುಡುಗರು-ಹುಡುಗಿಯರು ಕಾಣಿಸಲಿಲ್ಲ. ಸರಿ ಸುಮಾರು 22-23 ವಯೋಮಿತಿಯ ಹುಡುಗರು-ಹುಡುಗಿಯರು ಇದ್ದರು. ಆದರೆ ಬೇರೆ ಕಡೆ ಈ ರೀತಿ ಆಗುತ್ತದೆ ಎಂದು ಹೇಳಿದರೂ ಆದರೆ ನಾನು ಅಲ್ಲಿಗೆ ಹೋಗಲಿಲ್ಲ. ನೋಡಲಿಲ್ಲ. ಆದರೆ ನಾನು ಕಂಡ ಹಾಗೆ ವೇದಿಕೆಯ ಮೇಲೆ ಬಾಲ್ಯವಿವಾಹ ಆಗಲಿಲ್ಲ.

ಮಾನ್ಯ ಸದಸ್ಯರು ; ಶ್ರೀಮಂತರ ಮನೆಯ ಮಕ್ಕಳು ಮದುವೆಯಾದರೆ ಯಾರೂ ಪ್ರಶ್ನಿಸುವುದಿಲ್ಲ. ಆದರೆ ಬಡವರು ಸಾಮೂಹಿಕವಾಗಿ ಮದುವೆಯಾದರೆ ಅದನ್ನು ವಯಸ್ಸಿನ ಲೆಕ್ಕಹಾಕಿಕೊಂಡು ಹೋದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಉಪಮುಖ್ಯಮಂತ್ರಿ ಮಾನ್ಯ ಸಿದ್ದರಾಮಯ್ಯ ಮತ್ತು ಇತರೆ ಕೆಲವು ಸಚಿವರು ಈ ಮದುವೆಯಲ್ಲಿ ಭಾಗವಹಿಸಿದ್ದಾರೆಂದು ಹೇಳುವ "ಪ್ರಜಾವಾಣಿ'ಯಲ್ಲಿ ಪ್ರಕಟವಾಗಿರುವ ವರದಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು : ಅವರೀಗಾಗಲೇ ಹೋಗಿಲ್ಲವೆಂದು ಹೇಳಿದ್ದರಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಅವರೇನು ಹೇಳುತ್ತಿದ್ದಾರೆಂದರೆ, ಇದರ ಬಗ್ಗೆ ನಂಬಿಕೆ ಇಡುತ್ತಿಲ್ಲ. ತಾವು ಇದರ ಬಗ್ಗೆ ನಂಬಿಕೆ ಇಡಬೇಕೆಂದು ಈ ವಿಚಾರವನ್ನು ನಾನು ಓದಿ ಹೇಳುತ್ತಿದ್ದೇನೆ ಸ್ವಲ್ಪ ಕೇಳಿ. "ಲಿಂಗಸೂಗೂರು ಶಾಸಕರಾದ ಅಮರೇಗೌಡ ಬೈಯ್ಯಾಪುರ ಅವರು ತಮ್ಮ ಪುತ್ರಿಯ ವಿವಾಹ ಸಮಯದಲ್ಲಿ 150ಕ್ಕೂ ಹೆಚ್ಚು ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಇದೇ ಸಂದರ್ಭದಲ್ಲಿ ಸುಮಾರು 12 ರಿಂದ 14 ವರ್ಷ ವಯಸ್ಸಿನ 5 ಜೋಡಿಗಳು ಇದ್ದರು"

ಶ್ರೀ ಕಾಗೋಡು ತಿಮ್ಮಪ್ಪ : ಇದಕ್ಕೇನು ದಾಖಲೆ?

ಶ್ರೀ ವಾಟಾಳ್ ನಾಗರಾಜ್ : ಏನು ದಾಖಲೆ ಎಂದರೆ ಈ ಪತ್ರಿಕೆಯೇ ದಾಖಲೆ.

ಶ್ರೀ ಕಾಗೋಡು ತಿಮ್ಮಪ್ಪ : ಇದು ಅಪರಾಧ ಎಂದು ಕಂಡಿರಬೇಕಾದರೆ, ವಯಸ್ಸು ನೋಡುವುದಕ್ಕೆ ಯಾರಿಂದಲೂ ಸಾಧ್ಯವಿಲ. ಇದಕ್ಕೆ ಡಾಕರ್ ಸರ್ಟಿಫಿಕೇಟ್ ಕೊಡಬೇಕು. ಇಲ್ಲವಾದರೆ

ಅವರು ಹುಟ್ಟಿದ ತಾರೀಖನ್ನು ಖಚಿತಪಡಿಸಿಕೊಳ್ಳಲು ಅವರು ಕಲಿತಿರುವ ಶಾಲೆಗೆ ಹೋಗಿ ದಾಖಲಾತಿಯನ್ನು ನೋಡಬೇಕು. ಈ ದಾಖಲಾತಿಯನ್ನು ಪರೀಕ್ಷಿಸಿ ಹೌದು ಎಂದು ಹೇಳಿದರೆ ನೀವು ಹೇಳುವ ವಾದವನ್ನು ಒಪ್ಪಬಹುದು.

ಉಪಾಧ್ಯಕ್ಷರು : ಪ್ರತಿ ವರ್ಷ ನಮ್ಮ ಕ್ಷೇತ್ರದಲ್ಲಿ ನಾವು ಮದುವೆಯನ್ನು ಮಾಡುತ್ತೇವೆ. ನಾವು ಮದುವೆಯನ್ನು ಮಾಡುವಾಗ, ಪಂಚಾಯಿತಿಯಿಂದ ಸರ್ಟಿಫಿಕೇಟ್ ತರಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಧರ್ಮಸ್ಥಳದಲ್ಲಿ ಮದುವೆ ಮಾಡುತ್ತಾರೆ. ಅವರು ಹುಟ್ಟಿದ ದಿನಾಂಕ ಸರ್ಟಿಫಿಕೇಟ್ ತರಿಸುತ್ತಾರೆಯೇ?

ಶ್ರೀ ವಾಟಾಳ್ ನಾಗರಾಜ್ : ಕಾಗೋಡು ತಿಮ್ಮಪ್ಪನವರು ಹೇಳುತ್ತಾರೆ. ಮದುವೆಯನ್ನು ಧರ್ಮಸ್ಥಳದಲ್ಲಿ ಮಾಡಿರಬಹುದು, ಸುತ್ತೂರಿನಲ್ಲಿ ಆಗಿರಬಹುದು, ಸಿರಿಗೇರಿಯಲ್ಲಿ ಆಗಿರಬಹುದು ಚಿತ್ರದುರ್ಗದಲ್ಲಿ ಆಗಿರಬಹುದು, ಮಠಾಧಿಪತಿಗಳು ಮದುವೆಯನ್ನು ಮಾಡಿಸಿರಬಹುದು, ಧಾರ್ಮಿಕ ಪೀಠಾಧಿಪತಿಗಳು ಮಾಡಿಸಿರಬಹುದು, ಯಾರು ಬಾಲ್ಯವಿವಾಹ ಮಾಡಿಸುವುದಕ್ಕಾಗುವುದಿಲ್ಲ, ಇದು ಬಹಳ ಅಪರಾಧ. ಅದರ ಬಗ್ಗೆ ನಾವು ತಮಗೆ ಹೇಳುತ್ತೇನೆ, ಈ ಮದುವೆಯ ಸಮಾರಂಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಮತ್ತು ಎಸ್.ಎಸ್. ಪಾಟೀಲರೂ ಕೂಡ ಮದುವೆಗೆ ಹೋಗಿದ್ದರು. ಇನ್ನೂ ಅನೇಕ ಮಂತ್ರಿಗಳು ಇದರಲ್ಲಿ ಭಾಗವಹಿಸಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಉಪಮುಖ್ಯಮಂತ್ರಿಗಳು ಆ ಮದುವೆಗೆ ಹೋಗಿಲ್ಲ. ಇದನ್ನು ಕಾನೂನು ಸಚಿವರು ನಿರಾಕರಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಕಾನೂನು ಮಂತ್ರಿಗಳ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ಇಲ್ಲಿ ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದಾರೆ. ಉಪ ಮುಖ್ಯಮಂತ್ರಿಗಳು, ಎಸ್.ಎಸ್. ಪಾಟೀಲರು, ಜವಳಿ ಸಚಿವರು ಈ ಮದುವೆಗೆ ಹೋಗಿದ್ದು ನಿಜ.

ಉಪಾಧ್ಯಕ್ಷರು : ಅವರು ಆ ಮದುವೆಗೆ ಹೋಗಿದ್ದಾರೆಂದು ಹೇಳುತ್ತೀರಿ, ನೀವು ಹೋಗಿದ್ದಿರಾ?

ಶ್ರೀ ವಾಟಾಳ್ ನಾಗರಾಜ್ : ನಾನು ತಿಳಿದುಕೊಂಡಿದ್ದೇನೆ, ಸಮಗ್ರವಾಗಿ ವಿಚಾರಣೆ ಮಾಡಿ ಅವರು ಹೇಳಿಕೆಯನ್ನು ಕೊಡಲಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾರಾಸಗಟವಾಗಿ ಇಲ್ಲವೆಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಾಗೋಡು ತಿಮ್ಮಪ್ಪನವರು ಏನು ಸಾಕ್ಷಿ ಎಂದು ಕೇಳುತ್ತಾರೆ. ಹೇಗೆ ಇದು ಪತ್ರಿಕೆಯಲ್ಲಿ ಬಂದಿದೆ, ಪತ್ರಿಕೆಯಲ್ಲಿ ಬಂದಿರುವ ಸುದ್ದಿಗಳು ಅವರು ತಪ್ಪು ಎಂದು ನಿರಾಕರಣೆ ಮಾಡಲಿ. ಮದುವೆಗೆ ಉಪ ಮುಖ್ಯಮಂತ್ರಿಗಳು ಹೋಗಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ಸಣ್ಣ ಪುಟ್ಟ ತಪ್ಪುಗಳಾಗುತ್ತವೆ. ಮತ್ತು ಬಾಲ್ಯ ವಯಸ್ಸಿನವರು ಬರುತ್ತಾರೆ ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಅವರು ಒಪ್ಪಿಕೊಂಡಿದ್ದಾರೆ. ನೀವು ಇಲ್ಲವೆಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಮದುವೆಗೆ ಹೋಗಿದ್ದು ಸುಳ್ಳು ಎಂದು ಅವರು ನಿರಾಕರಣೆ ಮಾಡಲಿ. ಪತ್ರಿಕೆಯಲ್ಲಿ ಬಂದಿರುವ ಸುದ್ದಿ ಸುಳ್ಳು ಎಂದು ಅವರು ಹೇಳಲಿ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಹೆಣ್ಣು ಮತ್ತು ಗಂಡಿನ ವಯಸ್ಸನ್ನು ನೋಡಿ ಮದುವೆಗೆ ಹೋಗುತ್ತಾರೆಯೇ?

ಶ್ರೀ ವಾಟಾಳ್ ನಾಗರಾಜ್ : ಬಾಲ್ಯ ವಿವಾಹ ಮಾಡಬೇಕು ಮಾಡಬಾರದೆಂದು ಅಲ್ಲ ನಮ್ಮ ನೀತಿ ಏನು ಹೇಳುತ್ತದೆ. ತಮಗೆ ಬಡವರ ಬಗ್ಗೆ ಕಳಕಳಿ ಇದೆ, ನಮಗೂ ಬಡವರ ಬಗ್ಗೆ ಕಳಕಳಿ ಇದೆ. ತಾವು ನಮಗೆ ಕಳಕಳಿ ಇಲ್ಲವೆಂದು ತಿಳಿದುಕೊಳ್ಳಬೇಡಿ.

ಶ್ರೀ ಎಸ್. ಕೃಷ್ಣಪ್ಪ : ಮದುವೆಗೆ ಹೋಗುವವರು ಅಪರಾಧಿಗಳು ಅಲ್ಲ. ಬಾಲ್ಯ ವಿವಾಹ ಮಾಡುವವರು ಅಪರಾಧಿಗಳು, ನೀವು ಅವರ ಮೇಲೆ ಅಪರಾಧವನ್ನು ಹಾಕಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ವಾಟಾಳ್‌ರವರೇ, ನಿಮ್ಮ ಕಡೆ ಆಗುವಷ್ಟು ಬಾಲ್ಯ ವಿವಾಹ ಬೇರೆಯವರ ಕ್ಷೇತ್ರದಲ್ಲಿ ಆಗುವುದಿಲ್ಲ. ತಾವು ಇದರ ಬಗ್ಗೆ ಎಷ್ಟು ಕಾಳಜಿಯನ್ನು ವಹಿಸಿದ್ದೀರಿ? ಈ ಸಮಾಜದ ಪಿಡುಗನ್ನು ಇವರು ಎಷ್ಟು ನಿರ್ಮೂಲನೆ ಮಾಡಿದ್ದಾರೆ? ಈ ಕಾನೂನಿನ ವಿರುದ್ಧ ಎಷ್ಟೋ ಮದುವೆಗಳು ಆಗುತ್ತವೆ, ಇವರೂ ಕೂಡ ಎಷ್ಟೋ ಮದುವೆಗೆ ಅಟೆಂಡ್ ಮಾಡಿದ್ದಾರೆ. ಅಲ್ಲಿ ಈ ರೀತಿ ಕನಿಷ್ಠ ವಾರಕ್ಕೆ 20 ಮದುವೆಯಾದರೂ ನಡೆಯುತ್ತವೆ.

ಶ್ರೀ ವಾಟಾಳ್ ನಾಗರಾಜ್ : ತೋಟಗಾರಿಕೆ ಸಚಿವರು ಏನು ಹೇಳುತ್ತಾರೆ, ನಾವು ಅಂತಹ ಮದುವೆಯಲ್ಲಿ ಭಾಗವಹಿಸಿದ್ದರೆ ರಾಜೀನಾಮೆ ಕೊಡುತ್ತೇನೆ. ಇಲ್ಲವೆಂದರೆ ಅವರು ರಾಜೀನಾಮೆ ಕೊಡುತ್ತಾರಾ? ತಾವು ಬೇಕಾದರೆ ರುಜುವಾತು ಪಡಿಸಿ.

ಶ್ರೀ ಡಿ.ಟಿ. ಜಯಕುಮಾರ್ : ರಾಜೀನಾಮೆ ಕೊಡಲು ಅವಶ್ಯಕತೆ ಇಲ್ಲ. ಚಾಮರಾಜ ನಗರದಲ್ಲಿ ಎಷ್ಟೋ ಮದುವೆಗಳು ನಡೆದಿವೆ ಎಂಬುದು ಇವರಿಗೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದರ ಬಗ್ಗೆ ಹೇಳಬೇಕು ಇದನ್ನು ತಾವು ನಿರಾಕರಿಸುವುದಾದರೂ ಹೇಗೆ?

ಶ್ರೀ ಎಂ.ಸಿ. ನಾಣಯ್ಯ : ಉಪಾಧ್ಯಕ್ಷರೆ, ಎಲ್ಲಿ ಬಾಲ್ಯ ವಿವಾಹಗಳು ನಡೆದರೂ ಅದು ಕಾನೂನಿನ ದೃಷ್ಟಿಯಲ್ಲಿ ಅಪರಾಧ. ವಾಟಾಳ್ ನಾಗರಾಜ್‌ರವರು ಬಾಲ್ಯ ವಿವಾಹದ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಸರ್ಕಾರದ ಗಮನಕ್ಕೆ ಬಂದ ಮೇಲೆ, ಇಂತಹ ಬಾಲ್ಯ ವಿವಾಹಗಳು ಎಲ್ಲಿ ನಡೆದರೂ ಅದರ ಬಗ್ಗೆ ನಾವು ತನಿಖೆಯನ್ನು ನಡೆಸಬೇಕಾಗುತ್ತದೆ. ಯಾವರೀತಿಯಾಗಿ ತನಿಖೆ ನಡೆಸಬೇಕೆಂದು ಕಾನೂನಿನ ಅಡಿಯಲ್ಲಿ ಕೆಲವು ಪ್ರಕರಣಗಳು ಇವೆ. ನಾವು ಕಾನೂನಿನ ಅಡಿಯಲ್ಲಿ

ತನಿಖೆಯನ್ನು ನಡೆಸುತ್ತೇವೆ. ನಾವು ಈ ಸಂದರ್ಭದಲ್ಲಿ ತಮಗೆ ನೇರವಾಗಿ ಹೇಳಬೇಕಾಗುತ್ತದೆ. ಬಾಲ್ಯ ವಿವಾಹವನ್ನು ಯಾರು ಸಂಘಟನೆ ಮಾಡುತ್ತಾರೆ ಅಥವಾ ಮತಾಧಿಪತಿಗಳು ಯಾರೇ ಆಗಲಿ, 18 ವರ್ಷ ಕಳೆದ ಮೇಲೆ ಖಾತರಿಪಡಿಸಿಕೊಂಡು ಮದುವೆಯ ಕೆಲಸಕ್ಕೆ ಕೈಹಾಕಬೇಕು. ಯಾವುದೇ ಸಂದರ್ಭದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕ ಬಾಲಕಿಯರು ಮದುವೆಗೆ ಹೋಗುತಕ್ಕಂಥದ್ದನ್ನು ಅದನ್ನು ಮಾಡತಕ್ಕಂಥದ್ದನ್ನು ತಡೆಗಟ್ಟಲು ಎಲ್ಲರೂ ಪ್ರಯತ್ನ ಮಾಡಬೇಕಾಗುತ್ತದೆ. ಇದು ಸಾಮಾಜಿಕವಾದ ಸಮಸ್ಯೆ ಆಗಿರುವುದರಿಂದ ನಿಮ್ಮ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರ ಈ ಸಂದರ್ಭದಲ್ಲಿ ಯಾವುದೇ ಬಾಲ್ಯ ವಿವಾಹದ ವಿಷಯ ಗಮನಕ್ಕೆ ಬಂದರೆ, ಇದರ ಬಗ್ಗೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಕಾನೂನಿನ ಪ್ರಕಾರ ಬಾಲ್ಯ ವಿವಾಹ ಮಾಡುವುದಕ್ಕೆ ಅವಕಾಶ ಇಲ್ಲ. ಎಲ್ಲೆಲ್ಲಿ ಮದುವೆ ಆಗುತ್ತವೆ, ಆ ಮದುವೆಯ ಮುಂಚೆ ಇವರಿಗೆ ಪೊಲೀಸ್‌ರನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಬೇಕು. ಪೊಲೀಸರು ಅನುಮತಿ ಕೊಟ್ಟರೆ ಮದುವೆ ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ಪೊಲೀಸರನ್ನು ಮದುವೆಯ ಮಂಟಪಕ್ಕೆ ಕಳುಹಿಸಿದರೆ, ಅಲ್ಲಿರುವ ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರು ಓಡಿ ಹೋಗುತ್ತಾರೆ. ಅದಕ್ಕೆ ಪೊಲೀಸರನ್ನು ಕಳುಹಿಸುವ ಅವಶ್ಯಕತೆ ಇಲ್ಲ.

ಉಪಾಧ್ಯಕ್ಷರು : ಕಾನೂನು ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಾನೂನು ಕ್ರಮ ಕೈಗೊಳ್ಳುತ್ತೇವೆಂದು ಹೇಗೆ ಹೇಳುತ್ತಾರೆ? ಮಂತ್ರಿಗಳು ಈ ಮದುವೆಗೆ ಹೋಗಿಲ್ಲವೆ? ಹೋಗಿಲ್ಲವೆಂದು ಅವರು ಹೇಗೆ ಹೇಳುತ್ತಾರೆ. ಮಂತ್ರಿಗಳು ಹೋಗಿಲ್ಲವೆಂದು ಅವರು ನಿರಾಕರಣೆ ಮಾಡುತ್ತಾರೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬರುತ್ತಾ ಇಲ್ಲ. ನಾನು ಯಾವಾಗ ವಿಷಯವನ್ನು ಪ್ರಾರಂಭ ಮಾಡಬೇಕು? ನಾವು ಎಷ್ಟು ಸಲ ಹೇಳಬೇಕು. ನಾವು ಯಾವ ಭಾಷೆಯಲ್ಲಿ ಹೇಳಬೇಕು, ಅಷ್ಟು ಸಲ ಹೇಳಿದ್ದೇವೆ. ನಾವು ಅವರನ್ನು ಸದನಕ್ಕೆ ಕಾಡಿ ಬೇಡಿ ಕರೆದುಕೊಂಡು ಬರುವುದು ಅಲ್ಲ.

ಶ್ರೀ ಎಂ.ಸಿ.ನಾಣಯ್ಯ : ರಾಜ್ಯಪಾಲರ ಜೊತೆ ಒಂದು ಸಣ್ಣ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ. ರಾಜ್ಯಪಾಲರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗುತ್ತದೆ. ನಾನು ಅವರಿಗೆ ಬರಲು ಸಂದೇಶವನ್ನು ಕಳುಹಿಸಿದ್ದೇನೆ. ತಾವು ಪ್ರಾರಂಭ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಎಲ್ಲಕ್ಕಿಂತ ಅವಶ್ಯ. ನಾವು ಒಂದು ದಿವಸ ಅಡ್ವಾನ್ಸ್ ಪತ್ರವನ್ನು ಬರೆದಿರುತ್ತೇವೆ.

ಶ್ರೀ ಎಂ.ಸಿ. ನಾಣಯ್ಯ : ಮುಖ್ಯಮಂತ್ರಿಗಳು ರಾಜ್ಯಪಾಲರ ಜೊತೆಯಲ್ಲಿ ಒಂದು ಸಮಾರಂಭದಲಿ ಇದಾರೆ. ಅವರು ಸದ.ದಲಿಯೇ ಬರುತಾರೆ.

ಶ್ರೀ ಜಿ.ಬಿ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೇ ನನಗೆ ಮೊದಲು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಗೇಗೌಡರು ಬರಲಿ, ತಾವು ಆಮೇಲೆ ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಜಿ.ಬಿ. ಶಿವಕುಮಾರ್: ನನ್ನ ವಿಷಯ ಅವರಿಗೆ ಸಂಬಂಧಪಟ್ಟಿದ್ದು ಅಲ್ಲ, ಕೈಗಾರಿಕೆ ಸಚಿವರು ಇಲ್ಲಿಯೇ ಇದ್ದಾರೆ. ನಾನು ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಬಗ್ಗೆ ಪ್ರಸ್ತಾಪ ಮಾಡಬೇಕು. ಅದಕ್ಕಾಗಿ ನನಗೆ ಅವಕಾಶವನ್ನು ಮಾಡಿಕೊಡಬೇಕು.

ವಿತ್ತೀಯ ಕಾರ್ಯಕಲಾಪಗಳು

1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ಸುಮಾರು ಅವರ ಹೆಸರಿನ ಮುಂದೆ ಇರತಕ್ಕಂತಹ ಬೇಡಿಕೆಗಳು ಏನಿದೆ, ಅದು ಗೃಹ ಇಲಾಖೆ, ಅಬ್ಕಾರಿ, ಜನರಲ್ ಅಡ್ಮಿನಿಸ್ಟ್ರೇಷನ್ ಮತ್ತು ಉಳಿದ ಕೆಲವು ವಿಷಯಗಳನ್ನೂ ಕೂಡ ಅವರು ಇವತ್ತು ಮಂಡಿಸಿದ್ದಾರೆ. ನಾನು ಒಂದೆರಡು ವಿಷಯದ ಮೇಲೆ ಸೀಮಿತವಾಗಿ ಮಾತನಾಡುತ್ತೇನೆ. ಈ ಒಂದು ಬೇಡಿಕೆಯನ್ನು ಅನಿವಾರ್ಯವಾಗಿ ನಾವು ವಿರೋಧಿಸಬೇಕಾಗುತ್ತದೆ. ಅದಕ್ಕೆ ಕಾರಣವೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಕಳೆದ 3½ ವರ್ಷಗಳಲ್ಲಿ ಅವರ ಪಕ್ಷದ ಸರ್ಕಾರ ಆಡಳಿತದಲ್ಲಿದೆ. ಅದು ಸಾಮಾನ್ಯ ಜನರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಮತ್ತು ಅವರ ನೆಮ್ಮದಿಯನ್ನು ಕೊಡತಕ್ಕಂಥ ದಿಸೆಯಲ್ಲಿ ವಿಫಲವಾಗಿದೆ ಎಂದರೆ ಅತಿಶಯೋಕ್ತಿ ಅಲ್ಲ ಮತ್ತು ತಪ್ಪು ಕೂಡ ಇಲ್ಲವೆಂದು ನಾನು ಭಾವಿಸುತ್ತೇನೆ. ಇವತ್ತು ಶ್ರೀಮಾನ್ ಜೆ.ಹೆಚ್. ಪಟೇಲ್‌ರವರು ಅಧಿಕಾರವನ್ನು ವಹಿಸಿಕೊಂಡಾಗ ನಮ್ಮೆಲ್ಲರ ಅನಿಸಿಕೆ ಏನಿತ್ತು ಎನ್ನತಕ್ಕ ಮಾತನ್ನು ನಾನು ಒಂದೆರಡು ಸಲ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅವರು ಸಮಾಜವಾದಿ ಹಿನ್ನೆಲೆಯಲ್ಲಿ ಬಂದಿರುವ ಕಾರಣ, ಜನರ ಹಾಗೂ ಸಮಾಜದ ಅಪೇಕ್ಷೆ ಮತ್ತು ಆಡಳಿತ ಯಂತ್ರವನ್ನು ಯಾವ ರೀತಿಯಿಂದ ಚುರುಕುಗೊಳಿಸುತ್ತಾರೆ. ಅವರು ಅಧಿಕಾರದ ಚುಕ್ಕಾಣಿಯನ್ನು ಹಿಡಿದ ಮೇಲೆ, ಆ ಅಧಿಕಾರವನ್ನು ಉಪಯೋಗ ಮಾಡಿ ಸಾಮಾನ್ಯ ಜನರಿಗೆ ಏನು ಲಾಭವನ್ನು ಮಾಡುತ್ತಾರೆ, ಎಂತಹ ಪ್ರಗತಿಪರವಾದಂತಹ ಕಾನೂನುಗಳನ್ನು ತಂದು ಸಮಾಜದಲ್ಲಿ ಬದಲಾವಣೆಯನ್ನು ಮಾಡುತ್ತಾರೆ ಅಥವಾ ಪ್ರಗತಿಪರವಾದ ಕಾನೂನುಗಳನ್ನು ಜಾರಿಗೆ ತರುವುದರಲ್ಲಿ ಎಷ್ಟು ಆಸಕ್ತಿಯನ್ನು ವಹಿಸುತ್ತಾರೆ ಎನ್ನತಕ್ಕಂಥ ಒಂದು ಜನರ ಅನಿಸಿಕೆ ಏನಿತ್ತು ಅಥವಾ ಏನು ಅಪೇಕ್ಷೆ ಇತ್ತು ಅದರಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅವರು ಯಾವುದನ್ನೂ ಕೂಡ ಜನರ ಇಚ್ಛೆಯ ಪ್ರಕಾರ ಅಥವಾ ಅಪೇಕ್ಷೆಯ ಪ್ರಕಾರ ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ ಎನ್ನುವುದಕ್ಕೆ ಅನೇಕ ಉದಾಹರಣೆಗಳು ಇದೆ.